Indian Journal of History and Archaeology

ISSN (E):2582-225X
VOL-2, ISSUE -5,JANUARY-FEBRUARY, 2021, 17-23

# ಬೆಳ್ವೊಲ-೩೦೦ರ ಆಡಳಿತ ಪ್ರದೇಶದ ಶಾಸನ ಕವಿಗಳು

**ಪ್ರೊ. ಸಿದ್ಧಲಿಂಗೇಶ.ಉ.ಸಜ್ಜನಶೆಟ್ಟರ**

**ಪ್ರೊ.ಸಿದ್ಧಲಿಂಗೇಶಉ.ಸಜ್ಜನಶೆಟ್ಟರ**
**ಕನ್ನಡ ಸಹಾಯಕ ಪ್ರಾಧ್ಯಾಪಕರು**
**ಸ.ಪ್ರ.ದ.ಮ.ಕಾಲೇಜು.ಗದಗ**

**ಪಿಠೀಕೆ**: ಅಖಂಡವಾದ ನಮ್ಮ ದೇಶವನ್ನು ಕಾಲ ಕಾಲಕ್ಕೆ ವಿವಿಧ ದೇಶದ ಮತ್ತು ನಾಡಿನ ರಾಜರುಗಳು ತಮಗೆ ತಕ್ಕ ಹಾಗೆ ಆಡಳಿತವನ್ನು ನಿರ್ವಹಿಸಿದರು. ತಮ್ಮ ಆಡಳಿತದ ಅನುಕೂಲಕ್ಕಾಗಿ ಬೇರೆ ಬೇರೆ ಪ್ರದೇಶಗಳನ್ನಾಗಿ ವಿಭಾಗಿಸಿ ಆ ಪ್ರದೇಶಗಳಲ್ಲಿ ರಾಜರನ್ನು, ಮಂತ್ರಿಗಳನ್ನು, ಮಾಂಡಲೀಕರನ್ನು ನೇಮಿಸಿ ಕಾರ್ಯಭಾರ ಮಾಡಿದರು. ಅಂತೆಯೇ ಬೆಳ್ವೊಲ-೩೦೦ರ ಪ್ರದೇಶವು ಸಹಿತ. ಮೂನ್ನೂರು ಹಳ್ಳಿಗಳನ್ನು ಒಳಗೊಂಡ ಈ ಪ್ರದೇಶದ ರಾಜಧಾನಿ ಇವತ್ತಿನ ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಆದಿಕವಿ 'ಪಂಪ' ಹುಟ್ಟಿ ಬೆಳೆದ ಅಣ್ಣಿಗೇರಿಯಾಗಿತ್ತು. ಬೆಳ್ವೊಲ-೩೦೦ರ ಪ್ರದೇಶದ ಸಮಗ್ರವಾದ ಇತಿಹಾಸವನ್ನು ತಿಳಿಸಿಕೊಡುವ ಪ್ರಮುಖವಾದ ಆಕರಗಳೆಂದರೆ ಶಾಸನಗಳು. ಈ ಶಾಸನಗಳು ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಹೀಗೆ ಹತ್ತು ಹಲವು ವಿಚಾರಗಳನ್ನು ನಮಗೆ ತಿಳಿಸಿಕೊಡುತ್ತವೆ. ಅದರ ಜೊತೆಗೆ ಶಾಸನವನ್ನು ರಚಿಸಿದವರಾರು, ಕೆತ್ತಿದವರಾರು ಎಂಬುದನ್ನು ನಾವು ಶಾಸನದ ಕೊನೆಯ ಸಾಲುಗಳಲ್ಲಿ ಕಾಣುತ್ತೇವೆ. ಬೆಳ್ವೊಲ-೩೦೦ರ ಪ್ರದೇಶಗಳಲ್ಲಿ ಸಿಗುವ ಪ್ರತಿಯೊಂದು ಶಾಸನಗಳಲ್ಲಿ ಕವಿ, ಲಿಪಿಕಾರ, ಖಂಡಣೇಗಾರರ ಹೆಸರುಗಳು ಲಭ್ಯವಾಗುವುದಿಲ್ಲ. ಆದರೆ ಬಹುತೇಕ ಶಾಸನಗಳಲ್ಲಿ ಶಾಸನಗಳಲ್ಲಿ ಕವಿ, ಲಿಪಿಕಾರ ಮತ್ತು ಖಂಡಣೇಗಾರರ ಸ್ಪಷ್ಟ ಮಾಹಿತಿಗಳು ಲಭ್ಯವಾಗುತ್ತವೆ.

**ಶಾಸನ ಕವಿಗಳು**: ಶಾಸನದ ಅರ್ಧಭಾಗದ ಕೊನೆ-ಕೊನೆಯ ಸಾಲುಗಳಲ್ಲಿ ಶಾಸನ ಕವಿಗಳ ಹೆಸರುಗಳು ಕಂಡು ಬರುತ್ತವೆ. ಇವರ ಕಾರ್ಯವೆನೆಂದರೆ 'ಶಾಸನ'-

ಅಂದರೆ ರಾಜಾಜ್ಞೆ. ರಾಜನು ಒಂದು ವಿಷಯದ ಕುರಿತು ಶಾಸನ ರಚಿಸಲು ಆಜ್ಞೆ ಮಾಡಿದಾಗ ಕವಿಯಾದವನು ಶಾಸನ ರಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾನೆ. ಶಾಸನದಲ್ಲಿ ಬರುವ ಪಠ್ಯವನ್ನು ವ್ಯಾಕರಣ, ಛಂದಸ್ಸಿನ ರೂಪವನ್ನು ಕೊಟ್ಟು ಹೇಳಬೇಕೆಂದಿರುವ ವಿಷಯವನ್ನು ಸಿದ್ಧಪಡಿಸಿಕೊಳ್ಳುತ್ತಾನೆ. ಕರ್ನಾಟಕವನ್ನಾಳಿದ ಬಹುತೇಕ ರಾಜಮನೆತನಗಳು ತಮ್ಮ ಆಸ್ಥಾನಗಳಲ್ಲಿ ಕವಿಗಳಿಗೆ ಆಶ್ರಯವನ್ನು ನೀಡಿರುವುದು ಚರಿತ್ರೆಯಿಂದ ತಿಳಿದುಬರುತ್ತದೆ. ಹಾಗೆಯೇ ಬೆಳ್ವೊಲ-೩೦೦ರ ಪ್ರದೇಶಗಳಲ್ಲಿ ಸಿಗುವ ಶಾಸನಗಳನ್ನು ಗಮನಿಸಿದಾಗ ಈ ಪ್ರದೇಶಗಳಲ್ಲಿಯೂ ಸಹಿತ ಒಳ್ಳೆಯ ಅನುಭವಿಕ ಪಾಂಡಿತ್ಯ ಹೊಂದಿರುವ ಶಾಸನ ಕವಿಗಳಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಈ ಪ್ರದೇಶಗಳಲ್ಲಿ ಕಂಡುಬರುವ ಶಾಸನ ಕವಿಗಳನ್ನು ಕೆಳಗಿನಂತೆ ಕಾಣಬಹುದು.

1. **ಸಜ್ಜನತಿಲಕ:**

   ಕ್ರಿ.ಶ.117೦ರ ಕುಕನೂರಿನ ಶಾಸನ ದಲ್ಲಿ ಸಜ್ಜನತಿಲಕ ಶಾಸನ ಕವಿಯ ಪ್ರಸ್ತಾಪವಿದೆ. ಇವನೊಬ್ಬ ಪಾಂಡಿತ್ಯ ಹೊಂದಿದ ಮತ್ತು ಹಲವು ಭಾಷೆಗಳನ್ನು ಬಲ್ಲವನಾಗಿದ್ದ ಎಂಬುದಕ್ಕೆ ಶಾಸನಗಳಲ್ಲಿ ಬಳಸಿದ ಛಂದಸ್ಸು, ಅಲಂಕಾರಗಳು ಸಾಕ್ಷಿಯಾಗಿವೆ.

**ಸುಕವಿ ಪರಮಾ.. ಸುತಂ**

**ನಲವಿಂ ಪೇಳ್ದಂ ಸಜ್ಜನತಿಲಕನೆನಲು**

**ಮೆಚ್ಚನಾವನೀ ಶಾಸನಮಂ!!**

ಈ ಪದ್ಯದಲ್ಲಿ ಕಂಡುಬರುವ ಸಾಲುಗಳೇ ತಿಳಿಸುವಂತೆ ಇವನೊಬ್ಬ ಸುಕವಿಯಾಗಿದ್ದು, ರಾಜನ ಆಸ್ಥಾನಿಕರೆಲ್ಲರೂ ಇವನ ಪಠ್ಯವನ್ನು ಮೆಚ್ಚಿಕೊಳ್ಳುತ್ತಿದ್ದರು.

2. **ನಾಗದೇವ:**

ಬೆಳ್ವೊಲ-೩೦೦ರ ಪ್ರದೇಶಗಳಲ್ಲಿಯೇ ಜನಪ್ರೀಯ ಶಾಸನ ಕವಿಯಾಗಿದ್ದವನು 'ನಾಗದೇವ'ನು. ಕ್ರಿ.ಶ.10ನೇ ಶತಮಾನದಲ್ಲಿ ಬರುವ ಈ ಶಾಸನಕವಿಯು, 6ನೇ ವಿಕ್ರಮಾದಿತ್ಯನ ಕಾಲದಲ್ಲಿದ್ದ. ಈ ಭಾಗದ ಶಾಸನಗಳಲ್ಲಿ ಇವನನ್ನು ಪೊಂಬೊಳಲ ನಾಗದೇವ ಎಂದು ಕರೆಯುತ್ತದ್ದರು. 'ಪೊಂಬಳ' ಅಥವಾ ಪೊಂಬಳ್ಚ ಎಂದು ಗದಗ ಸಮೀಪ ಹೊಂಬಳ ಗ್ರಾಮವಿರುತ್ತದೆ. ಹೀಗಾಗಿ ಇವನ ಪೂರ್ವಿಕರು ಅಥವಾ ಇವನ ಮೂಲ ನೆಲೆ ಹೊಂಬಳ ಆಗಿರಬಹುದು. ಹೀಗಾಗಿ ಇವನನ್ನು ಪೊಂಬಳಲ್ ನಾಗದೇವ ಎಂದು ಶಾಸನಗಳಲ್ಲಿ ಕರೆದಿದ್ದಾರೆ. 6ನೇ ವಿಕ್ರಮಾದಿತ್ಯನ ಕಾಲದ ಕುರ್ತಕೋಟಿಯ ಶಾಸನದಲ್ಲಿ,

**ವಿಪ್ರಗ್ರಾಮಂ ಪೊಂಬೊಳಲ ನಾಗದೇವ ಬುಧಂ**

**ಬುಧತತಿ ಮೆಚ್ಚ ಕಾವ್ಯಮಂ ವಿರಚಿಸಿದ!!**

ಎಲ್ಲರೂ ಮೆಚ್ಚುವ ಹಾಗೆ ಕಾವ್ಯವನ್ನು ವ್ಯವಸ್ಥಿತವಾಗಿ ರಚಿಸುತ್ತಿದ್ದ. ಇವನು ರಚಿಸಿದ ಶಾಸನಗಳಲ್ಲಿನ ಕೆಲವು ಪದ್ಯಗಳನ್ನು ಗಮನಿಸಿದಾಗ ಸಹಜವಾದ ಅರ್ಥದೊಂದಿಗೆ ಪಂಡಿತ–ಪಾಮರರಿಗೆ ತಿಳಿಯುವ ರೀತಿಯಲ್ಲಿ ರಚಿಸುತ್ತಿದ್ದನು. ಅದೇ ರೀತಿ ಊರಿನ ಮತ್ತೊಂದು ಶಾಸನವು ನಾಗದೇವನ ಕುರಿತು ಮಾಹಿತಿ ತಿಳಿಸುತ್ತದೆ.

**ಸಿರಿಗುಪ್ಪೆಯೊಳಾದರದಿಂ ಮರಕಟ್ಟಿನ**

**ಪಿರಿಯ ಬಾವಿಯುಂ ಕೆರೆಯಂದು**

**ನಚ್ಚಿಯನೆ ಮಾಡಿ ಸಮಸ್ತೋರ್ವ್ವರಗೆಲ್ಲಂ**

**ನಗರ್ದ್ದನಲ್ತೆ ಬೆಳ್ಕೆಯರೆರೆಗ!!**

ಇವತ್ತು ಅಣ್ಣಿಗೇರಿಯ ಹತ್ತಿರವಿರುವ ಸಿರುಗುಪ್ಪೆಯ ಊರಿಗೆ ಬೆಳ್ಕೆಯರ ಎರೆಗನು ಬಾವಿ ಮತ್ತು ಕೆರೆಯನ್ನು ಮಾಡಿಸಿ, ಅಲ್ಲಿಯ ಜನರ ಮನಸ್ಸಿನಲ್ಲಿ ಹೇಗೆ ಉಳಿದುಕೊಂಡಿದ್ದ ಎಂಬುದನ್ನು ವರ್ಣನೀಯವಾಗಿ ವಿವರಿಸಿದ್ದಾನೆ. ಬೆಳ್ಕೆಯರಗನ ಬಗೆಗೆ, ಎರಡನೂರು ಮಹಾಜನರ ವಿಶೇಷತೆ ಹಾಗೂ ದಾನ–ದತ್ತಿಗಳನ್ನು ಬಹುಸುಂದರವಾದ ವರ್ಣನೆಯೊಂದಿಗೆ ರಚಿಸಿದ್ದನ್ನು ನೋಡಿದಾಗ ನಾಗದೇವ ಸಕಳಶಾಸ್ತ್ರ ಪಾರಂಗತನಾಗಿದ್ದನೆಂಬುದು ತಿಳಿಯುತ್ತದೆ.

**ಇನ್ತೀ ಶಾಸನಗಬ್ಬ ಮನೆನ್ತು ವಿಚಾರಿಪೊಡಿ ವುಚಿತಮೆಂಬನ್ತಿರೆ ವಿಕ್ರಾನ್ತಧನಂ ಜಯಲಕ್ಷ್ಮೀಕಾನ್ತಂ ಪೊಂಬೊಳಲ ನಾಗದೇವಂ ಪೇಳ್ದಂ!!**

ಈತನ ಕೀರ್ತಿ ಸುತ್ತ–ಮುತ್ತ ನಾಡಿನ ಉದ್ದಗಲಕ್ಕೂ ಹಬ್ಬಿತ್ತು. ಇಲ್ಲಿ ನಾಗದೇವನು ತನ್ನನ್ನು **'ಜಯಲಕ್ಷ್ಮೀಕಾಂತ'** ಎಂದು ಬಣ್ಣಿಸಿಕೊಂಡಿದ್ದಾನೆ. ಹಾಗೆಯೇ ಇದೇ ಊರಿನ ಕ್ರಿ.ಶ.1087ರ ಅವಧಿಯ 6ನೇ ವಿಕ್ರಮಾದಿತ್ಯನ ಕಾಲದ್ದೆ ಆದ ಮತ್ತೊಂದು ಶಾಸನದಲ್ಲಿ ನಾಗದೇವನ ಹೆಸರು ಕಂಡುಬರುವುದಿಲ್ಲ. ಕುರ್ತಕೋಟಿಯ ಎರಡು ಶಾಸನದಲ್ಲಿ ಮೂಡಿ ಬಂದ ಸಾಹಿತ್ಯಿಕ ವರ್ಣನೆ ಮತ್ತು ಈ ಶಾಸನದಲ್ಲಿ ಕಾಣುವ ಸಾಹಿತ್ಯಕ ವರ್ಣನೆ ಒಂದೆಯಾಗಿದೆ. ಮತ್ತು ಈ ಶಾಸನವನ್ನು "ಕುಳಕರಣಿ ಮಾಬಲಾರ್ಯ" ಬರೆದಿರುವುದರಿಂದ. ಈ ಶಾಸನದ ಕವಿಯೂ ನಾಗದೇವನೇ ಎಂದು ತಿಳಿಯಬಹುದು.

ಒಟ್ಟಿನಲ್ಲಿ ನಾಗದೇವ ಬೆಳ್ವೊಲ–300ರ ಪ್ರದೇಶದಲ್ಲಿ ಒಬ್ಬ ಶ್ರೇಷ್ಠ ಶಾಸನ ಕವಿಯಾಗಿದ್ದನೆಂದು ಹೇಳಬಹುದು.

### 3.ಬಸವಣ್ಣಯ್ಯ (ಕ್ರಿ.ಶ.1062)

ಬೆಳ್ವೊಲ–300ರ ಪ್ರದೇಶದ ಉಪಆಡಳಿತ ಪ್ರದೇಶವಾದ ಮುಳಗುಂದ–12ರಲ್ಲಿನ ಮುಳಗುಂದದ ಕ್ರಿ.ಶ.1062ರ 1ನೇ ಸೋಮೇಶ್ವರನ ಕಾಲದ ಶಾಸನದಲ್ಲಿ,

**ಅನುಪಮತರಾಕ್ಷರಂ**

**ಬುಧಜನಮಂ ಜೀಯನಿಸೆ**

**ಸಕಳವಿದ್ಯಾನಿಳಯಮನುಮುನಿಚರಿತ್ರ**

**ನೀ ಶಾಸನಮಂ ಮನ್ನೆಯರ ಬಸವಣಯ್ಯಂ ಬರೆದಂ!!**

ಬಸವಣ್ಣಯ್ಯ ಒಬ್ಬ ಶ್ರೇಷ್ಠ ಶಾಸನ ಕವಿಯಾಗಿದ್ದ ಎಂಬುದು ತಿಳಿಯುತ್ತದೆ. ಈ ಶಾಸನದ ಇಡೀ ಪದ್ಯದ ಸಾಲುಗಳನ್ನು ಅವಲೋಕಿಸಿದಾಗ ಈತನಿಗೆ ಛಂದಸ್ಸಿನ ಮೇಲಿನ ಹಿಡಿತ ಇತ್ತೆಂಬುದು ಸ್ಪಷ್ಟವಾಗುತ್ತದೆ. ಇಲ್ಲಿ 'ಮನ್ನೆಯರ' ಎಂಬುದು ರಾಜರು ಕೊಡುವ ಒಂದು ಗೌರವ ಸೂಚಕವಾಗಿದ್ದಿರಬಹುದು.

4. **ಚತುರ್ಮುಖ ರುದ್ರಭಟ್ಟ:**

ಚತುರ್ಮುಖ ರುದ್ರಭಟ್ಟ ಶಾಸನ ಕವಿ ಹೆಸರಿಗೆ ತಕ್ಕ ಹಾಗೆ ಚತುರ್ಮುಖ ಅಂದರೆ ಬ್ರಹ್ಮ ಜ್ಞಾನವನ್ನು ಹೊಂದಿದ್ದ ಎಂಬುದಕ್ಕೆ ನರಗುಂದದ ಶಾಸನದಿಂದ ತಿಳಿದುಬರುವುದು. ಎರಡನೇ ಸೋಮೇಶ್ವರನ ಕಾಲದ ಕ್ರಿ.ಶ.1074ರ ಅವಧಿಯ ಶಾಸನದಲ್ಲಿ ಬರುವ ಕಾವ್ಯವನ್ನು ನೋಡಿದಾಗ ಅವನ ಜಾಣ್ಮೆ ತಿಳಿಯುತ್ತದೆ. 'ಚತುರ್ಮ್ಮುಖ ರುದ್ರಭಟ್ಟರ ಕಾವ್ಯಂ!!' ಬಹಳಷ್ಟು ಅಕ್ಷರಗಳು ಅಳಸಿ ಹೋಗಿರುವುದರಿಂದ ಪರಿಪೂರ್ಣ ಮಾಹಿತಿ ಲಭ್ಯವಾಗುವದಿಲ್ಲ. ಆದರೆ ನರಗುಂದದ ಮೆಕ್ಕೆಗೇರಿ ಮಹಾಜನರಿಗೆ ದಾನ ನೀಡಿರುವ ವಿಷಯ ಕಾವ್ಯಮಯವಾಗಿರುವುದು ತಿಳಿದುಬರುತ್ತದೆ.

೫. **ಹಿಟ್ಟಿನ ಸೇನಭೋವ** :

ಅಗ್ರಹಾರವಾಗಿದ್ದ ಚಿಕ್ಕಹಂದಿಗೋಳದ ಕ್ರಿ.ಶ.1174ರ ಶಾಸನದಲ್ಲಿ

**ವಿನಯ ನಿಧಿ ಪೇಳ್ದನೀ ಶಾಸನಗಬ್ಬ**

**ಮನಲ್ತೆ ಹಂದಿಗೊಳ ವೆರಡವಿ**

**ಹಿಟ್ಟಿನ ಸೇನಬೋವನೆನೆ ನೆಗಳ್ದೆ ನುಪಮಕವಿ ಕಾಳದಾಸ...ಚಿತವಿಳಾಸ!!**

ಜೈನ ಬಸದಿಗೆ ನೀಡಿದ ದಾನಗಳನ್ನು ಕಾವ್ಯಮಯವಾಗಿ ರಚಿಸಿದ ಸೇನಬೋವ ತನ್ನನ್ನು **'ಅನುಪಮಕವಿ ಕಾಳದಾಸ'** ಎಂದು ಕರೆದುಕೊಂಡಿದ್ದಾನೆ. ಕ್ರಿ.ಶ.೧೦೯೯ರ ಅದೇ ಊರಿನ ಮತ್ತೊಂದು ಶಾಸನದಲ್ಲಿ, **ಬಾಣಗದ್ಯ(ವಾ)ಲಿಖಿತ ಪಿತಾಮಹನೆನ್ದೊರೆಯೊಳೊಪ್ಪಿರ ಲಹರ್ಣ್ನಿಶಂ ಬರೆದನೆ....ಯ ಮಲ್ಲಂ!!** ಎಂದಿದೆ. ಅಂದರೆ ಸೇನಬೋವನಕ್ಕಿಂತ ಪೂರ್ವದಲ್ಲಿ 'ಮಲ್ಲ' ಅಥವಾ ಮಲ್ಲನ ಎಂಬ ಶಾಸನ ಕವಿ ಇರುವುದು ತಿಳಿಯುತ್ತದೆ.

ಕೊಟ್ಟಿಗದೇವನ ಆಳ್ವಿಕೆಯ ಕಾಲದ ಕ್ರಿ.ಶ.970ರ ಹೀರೆಹಂದಿಗೋಳ ಶಾಸನವು 'ಕೊನ್ತದ ಪೆಗ್ಗಲಯ್ಯನ' ಆಡಳಿತದ ಬಗೆಗೆ ತಿಳಿಸುತ್ತದೆ. ಒಟ್ಟು 24 ಸಾಲುಗಳನ್ನು ಹೊಂದಿದ ಈ ಶಾಸನವು. 'ದೇವಯ್ಯ' ಎಂಬ ಕವಿಯು ಶಾಸನವನ್ನು ಬರೆದಿರುತ್ತಾನೆ.

6. **ಸೂರಿಅಯ ಮುಖ್ಯ ಪಂಡಿತ (ಕ್ರಿ.ಶ.1148)** :

ಸುಮಾರು 89-90 ಸಾಲುಗಳನ್ನು ಹೊಂದಿದ ಹೊಸೂರಿನ ಶಾಸನವು ಕಾವ್ಯಮಯವಾಗಿದ್ದು, ಈ ಭಾಗವನ್ನು ಆಳುತ್ತಿದ್ದ ನಾಗಗಾವುಂಡ ಮತ್ತು ಇವನ ಮಗ ಹೊಲ್ಲಗಾವುಂಡನ ವರ್ಣನೆಯನ್ನು ಕಾಣುತ್ತವೆ. 'ಸೂರಿಅಯ ಮುಖ್ಯ ಪಂಡಿತರ ಕವಿತೆ' ಈ ಇಡೀ ಶಾಸನದಲ್ಲಿ ಕಂದ, ವೃತ್ತಗಳ ಬಳಕೆ ಮೂಡಿದುದನ್ನು ನೋಡಿದಾಗ ಇವರು ಒಬ್ಬ ಪ್ರಸಿದ್ಧ ಹಾಗೂ ಈ ಭಾಗದ ಮುಖ್ಯ ಪಂಡಿತರೇ ಆಗಿದ್ದರು ಎಂಬುದು ತಿಳಿಯುತ್ತದೆ.

ಬೆಳ್ವೊಲ-300ರ ಪ್ರದೇಶಗಳಲ್ಲಿ ಕ್ರಿ.ಶ.1150ರ ಕಾಲಮಾನದಲ್ಲಿ ಬಂದಿರುವ ಬಹುತೇಕ ಶಾಸನ ಪದ್ಯಗಳನ್ನು ಇದೇ ಕವಿಗಳು ರಚಿಸಿದ್ದಾರೆ. **"ಶ್ರೀ ಮತ್ಕರ್ಣಾಟ ಸುಕವಿ"** ಎಂಬ ಬಿರುದು ಹೊಂದಿದ ಈ ಕವಿಯ ಹೆಸರನ್ನು ಎಳವತ್ತಿಯ ಶಾಸನದಲ್ಲಿ ಕಾಣಬಹುದು.

7. **ಮಲ್ಲಿಕಾರ್ಜುನ (ಕ್ರಿ.ಶ.1080)** :

6ನೇ ವಿಕ್ರಮಾದಿತ್ಯನ ಕಾಲದ ನರಗುಂದದ ಶಾಸನದಲ್ಲಿ, **"ಬರೆದಂ ರಾಮರ ಸುತನಾದರದಿಂದ ಮಲ್ಲಿಕಾರ್ಜುನಂ"** ರಾಮನ ಮಗನಾದ ಮಲ್ಲಿಕಾರ್ಜುನನು ಈ ಶಾಸನವನ್ನು ರಚಿಸಿದನೆಂದು ಮತ್ತು ಇಡೀ ಶಾಸನ ಪದ್ಯದ ಸಾಲುಗಳು ಚಾಲುಕ್ಯ ವಂಶಜರ ಬಗೆಗೆ ಹೋಗಳಿಕೆಯಿಂದ ಕೂಡಿದವುಗಳಾಗಿವೆ. ಕಂದ, ವೃತ್ತಗಳನ್ನು ಕವಿಯು ಯತೇಚ್ಛವಾಗಿ ಇಲ್ಲ ಬಳಸಿಕೊಂಡಿದ್ದಾನೆ.

**ಉದಾ:** **ಒಸೆದು ಜಗತ್ರಯಮಂ ನಿರ್ಮ್ಮಿಸಿದಂ**
**ಚಾತುರ್ಮ್ಮುಖನವಂಶದೊಳ್ಪುಟ್ಟಿದ**
**ಸಾಹಸಿಗಂ ಚಳುಕ್ಯನಾತನಿನೆಸೆಗುಂ**
**ಚಾಳುಕ್ಯ ವಂಶಮಾ ವಂಶಜರೊಳ್** !!

ಕಂದ ಪದ್ಯವನ್ನು ಒಳಗೊಂಡ ಈ ಸಾಲುಗಳು ಚಾಲುಕ್ಯರ ವಂಶ ಮತ್ತು ಆ ವಂಶದಲ್ಲಿನ ಪರಾಕ್ರಮವನ್ನು ಈ ಕವಿ ವರ್ಣನೀಯವಾಗಿ ವರ್ಣಿಸಿದ್ದಾನೆ.

7. **ಸರ್ವಜ್ಞ ಪಟ್ಟವರ್ಧನ:**

ನರಗುಂದದ ಭಾಗದಲ್ಲಿ ಸಿಗುವ ಹೆಚ್ಚು ಸಾಲುಗಳನ್ನು ಹೊಂದಿರುವ, ಅಂದರೆ 83 ಸಾಲಗಳನ್ನು ಒಳಗೊಂಡಿರುವ ಶಾಸನವನ್ನು ಸರ್ವಜ್ಞ ಪಟ್ಟವರ್ಧನ ರಚಿಸಿರುತ್ತಾನೆ. ಹೆಸರಿಗೆ ತಕ್ಕಹಾಗೆ ಈತ ಸರ್ವಜ್ಞನಾಗಿದ್ದನು. ಇವನು ಬಳಸಿದ ಕಾವ್ಯಮಯವಾದ ಶಾಸನ ಸಾಲುಗಳನ್ನು ನೋಡಿದಾಗ ಕವಿಯ ಪಾಂಡಿತ್ಯವು ತಿಳಿಯುತ್ತದೆ. ನರಗುಂದದ

**ರಸದಿಂ ಶಬ್ದದಿನರ್ತ್ಥದಿನೆಸೆದಿರೆ**
**ಶಾಸನಕೆ ಕಾವ್ಯಮಂ ಸೇವ್ಯೆಮೆನಲು ಪೊಸದೆಸೆ**
**ಪಸರಿಸಲು ವಿರಚಿಸಿದಂ ಸರ್ವಜ್ಞ ಪಟ್ಟವರ್ಧನವಿಬುಧ!!**

ರಸಯುಕ್ತ ಕಾವ್ಯವನ್ನು ಈ ಕವಿಯು ರಚಿಸುತ್ತಿದ್ದನು. ಬೆಳ್ವೊಲ-300ರ ಪ್ರದೇಶವು ಒಟ್ಟು 18 ಅಗ್ರಹಾರವನ್ನು ಒಳಗೊಂಡಿತ್ತು ಎಂಬುದು ಇದೇ ಶಾಸನದಲ್ಲಿ ಕವಿಯು ಕಾವ್ಯಮಯವಾಗಿ ವರ್ಣಿಸಿದ್ದಾನೆ.

**ಉಪಸಂಹಾರ:**

ಹೀಗೆ ಬೆಳ್ವೊಲ-300ರ ಪ್ರದೇಶದಲ್ಲಿ ಕಂಡುಬರುವ ಶಾಸನಗಳ ಕವಿಗಳ ಜೊತೆಗೆ 6ನೇ ವಿಕ್ರಮಾದಿತ್ಯನ ಕಾಲದ ಕೋಟುಮುಚಗಿ ಶಾಸನವನ್ನು 'ಚಂದ್ರಭಟ್ಟ'ಕವಿ ವಿರಚಿಸಿದ್ದು ಎಂಬುದು ತಿಳಿದುಬರುತ್ತದೆ. ನಾಲ್ಕನೇ ಗೋವಿಂದನ ಕಾಲದ ಕ್ರಿ.ಶ.918ರ ಅವಧಿಯ ದಂಡಾಪೂರ ಶಾಸನವನ್ನು 'ರವಿ ನಾಗಭಟ್ಟ' ಎಂಬ ಕವಿ ಕಾವ್ಯಮಯತೆಯಿಂದ ರಚಿಸಿರುವ ಕುರಿತು ತಿಳಿಸುತ್ತದೆ. ಮುಳಗುಂದ-12ರ ಕುರ್ತಕೋಟಿಯ ಶಾಸನದಲ್ಲಿ 'ಕೇಶವರಾಜ' ಎಂಬ ಕವಿ 'ದೋಣಿ' ಶಾಸನವನ್ನು ಬರೆಸಿ ಧರ್ಮವನ್ನು ಪ್ರಕಟಿಸುತ್ತಾನೆ. 'ಬಾಹುಬಲಿದೇವ' ಈ ಭಾಗದ ಶಾಸನ ಕವಿಯಾಗಿದ್ದು, ಕ್ರಿ.ಶ.902ರ ಕಾಲಮಾನದಲ್ಲಿ ಸಂಸ್ಕೃತ, ಕನ್ನಡ ಭಾಷೆಗಳ ಅಗಾಧವಾದ ಜ್ಞಾನವನ್ನು ಹೊಂದಿದವನಾಗಿದ್ದನು. ನಾಗಮುದ್ದ, ಕಲಿದೇವ ಹೀಗೆ ಬೆಳ್ವೊಲ-300ರ ಪ್ರದೇಶಗಳಲ್ಲಿ ಬಹು ಭಾಷೆಯನ್ನು ಬಲ್ಲ ಪಾಂಡಿತ್ಯದ ನಿಧಿಯಾಗಿ ಶಾಸನ ಕವಿಗಳು ನಮಗೆ ದೊರೆಯುತ್ತಾರೆ.

**ಆಧಾರ ಗ್ರಂಥಗಳು:**

1. ಬೆಳ್ವೊಲ ಬೆಳಕು–ಸ್ಮರಣ ಸಂಚಿಕೆ
2. ಸಮೀಕ್ಷೆ –ಸ್ಮರಣ ಸಂಪುಟ 76ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆಯಾಗಿರುವ ಕೃತಿಗಳು
3. ಮುಳಗುಂದ ನಾಡು: ಒಂದು ಅಧ್ಯಯನ– ಡಾ. ಧನವಂತ ಹಾವಜಗೋಳ
4. ಕೊಪ್ಪಳ ಜಿಲ್ಲಾ ಶಾಸನ ಕೋಶ–ಭಾಗ–4 ಕನ್ನಡ ವಿಶ್ವವಿದ್ಯಾಲಯ. ಹಂಪಿ
5. Inscriptions:

   ೧. South Indian Inscriptions-Vol-XV

   2. South Indian Inscriptions- Vol-XI -I ,II

   3. South Indian Inscriptions-Vol- XVIII